ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ.ನಂ.1684/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಉಮೇಶ್ ಕಾಂಬ್ಳೆ** | | |
| **ತಂದೆ:ಹೆಸರು** | **ನಾರಾಯಣ** | **ಪಿಡಬ್ಲೂ:** | **08** |
| **ವಯಸ್ಸು** | **41 ವರ್ಷ** | **ಸಿಡಬ್ಲೂ:** | **23** |
| **ಉದ್ಯೋಗ:** | **ಪಿ ಐ** | | |
| **ವಾಸ ಸ್ಥಳ:** | **ಸದರ್ ಬಜಾರ್ ಪೋಲೀಸ್ ಠಾಣೆ, ರಾಯಚೂರು** | | |

**ದಿನಾಂಕ 12-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ::**

ಈ ದಿನ ನ್ಯಾಯಾಲಯದಲ್ಲಿ 2 ನೇ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ನಾನು 2021 ರಿಂದ 2022 ರವರೆಗೆ ಸಿಂಧನೂರಿನಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ:30-11-2021 ರಂದು ಈ ಪ್ರಕರಣದ ಕಡತವನ್ನು ಚಾಸಾ-22 ರವರಿಂದ ಪಡೆದು ಪರಿಶೀಲಿಸಿದೆನು.

ನಂತರ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಚಾಸಾ-1 ತೋರಿಸಿದ ಘಟನಾ ಸ್ಥಳದ ಪಂಚನಾಮೆಯನ್ನು ಚಾಸಾ-2 & 3 ರವರ ಸಮಕ್ಷಮ ಬೆ. 8 ರಿಂದ 9 ರವರೆಗೆ ಮಾಡಿರುತ್ತೇನೆ.

ಸಾಕ್ಷಿಗೆ ನಿಪಿ-2 ನ್ನು ತೋರಿಸಲಾಗಿ, ಸಾಕ್ಷಿಯು ತನ್ನ ಸಹಿಯನ್ನು ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-2 ಸಿ ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಕಚ್ಚಾ ನಕಾಶೆಯನ್ನು ತಯಾರಿಸಿದ್ದೆನು. ನಕಾಶೆಯನ್ನು ನಿಪಿ-15 ಎಂದು, ಸಾಕ್ಷಿಯ ಸಹಿಯನ್ನು ನಿಪಿ-15 ಎ ಎಂದು ಗುರುತಿಸಲಾಯಿತು. ನಂತರ ಚಾಸಾ-1, ಪದ್ಮಾವತಿ, ಕುಮಾರಿ ಅನಿಲ, ನಾಗೇಶ್ ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ದಿ.17-01-2022 ರಂದು ಕ್ರೈಂ ನಂ.146/2021 ರಲ್ಲಿ ದಸ್ತಗಿರಿ ಆದ ಆರೋಪಿ ಈ ಪ್ರಕರಣದಲ್ಲಿಯೂ ಸಹ ಆರೋಪಿಯಾಗಿದ್ದರಿಂದ ಆ ಪ್ರಕರಣದಲ್ಲಿದ್ದ ಸ್ವ ಖುಷಿ ಹೇಳಿಕೆಯ ಪ್ರತಿಯನ್ನು ಪಡೆದು, ಈ ಪ್ರಕರಣಕ್ಕೆ ಅಳವಡಿಸಿಕೊಂಡಿರುತ್ತೇನೆ. 1 ಆರೋಪಿಯ ಸ್ವಖುಷಿ ಹೇಳಿಕೆಗಳನ್ನು ನಿಪಿ-16 ಎಂದು, ಸಾಕ್ಷಿಯ ಸಹಿಯನ್ನು ನಿಪಿ-16 ಎ ಎಂದು ಗುರುತಿಸಲಾಯಿತು. ಸದರಿ ಕ್ರೈಂ ನಲ್ಲಿದ್ದ ಆಭರಣಗಳ ಜಪ್ತಿ ಪಂಚನಾಮೆಯ ಪ್ರತಿಯನ್ನು ಪಡೆದು, ಈ ಪ್ರಕರಣಕ್ಕೆ ಅಳವಡಿಸಿಕೊಂಡಿರುತ್ತೇನೆ. **ಸದರಿ ಜಪ್ತಿ ಪಂಚನಾಮೆಯನ್ನು ಈಗಾಗಲೇ ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-11 ಎ ಎಂದು ಗುರುತಿಸಲಾಯಿತು.**

ನಂತರ 1ನೇ ಆರೋಪಿ ತೋರಿಸಿದ ಗುನ್ನಾ ಸ್ಥಳದ ಪಂಚನಾಮೆಯನ್ನು ಮ. 12 ರಿಂದ 1 ಗಂಟೆಯವರೆಗೆ ಚಾಸಾ-6 & 7 ರವರ ಸಮಕ್ಷಮ ಅದೇ ದಿನ ಮಾಡಿ, ಫೋಟೋಗಳನ್ನು ತೆಗೆದಿರುತ್ತೇನೆ. ಸದರಿ ಪಂಚನಾಮೆಯನ್ನು ನಿಪಿ-17 ಎಂದು, ಸಾಕ್ಷಿಯ ಸಹಿಯನ್ನು ನಿಪಿ-17 ಎ ಎಂದು ಗುರುತಿಸಲಾಯಿತು. 1 ಫೋಟೋವನ್ನು ನಿಪಿ-5 ರಂತೆ ತೆಗೆದಿರುತ್ತೇನೆ. ಕಲಂ.65 ಬಿ ಪ್ರಮಾಣ ಪತ್ರವನ್ನು ನಿಪಿ-18 ಎಂದು, ಸಾಕ್ಷಿಯ ಸಹಿಯನ್ನು ನಿಪಿ-18 ಎ ಎಂದು ಗುರುತಿಸಲಾಯಿತು. ಅದೇ ದಿನ ವೆಂಕಟೇಶ್ವರ ರಾವ್, ಪದ್ಮಾವತಿ, ಕುಮಾರಿ ಅನಿಲಾ, ಕುಮಾರೆಪ್ಪ, ಆದಿಲ್, ಸಂಗನಗೌಡ ಸಿಪಿಸಿ, ಅನಿಲ್ ಕುಮಾರ್ 447, ಆದಯ್ಯ 67 & ಚಾಂದ್ ಪಾಷಾ 687 ರವರ ಮರು ಹೇಳೀಕೆಯನ್ನು ಪಡೆದಿರುತ್ತೇನೆ.

ಅದೇ ದಿನ ಕ್ರೈಂ ನಂ.146-2021 ರಲ್ಲಿ ನ್ಯಾಯಾಂಗ ಬಂಧನಕ್ಕೆ ಕಳಿಸಿದ್ದು, ಈ ಪ್ರಕರಣದಲ್ಲಿ ಬಾಡಿವಾರಂಟ್ ಪಡೆಯಲು ಮನವಿ ಸಲ್ಲಿಸಿದ್ದೆ. ದಿ.19-01-2022 ರಂದು ಕ್ರೈಂ ನಂ.146-2021 ರಲ್ಲಿ ಪಡೆದ 2 & 3 ನೇ ಆರೋಪಿತರ ಸ್ವಖುಷಿ ಹೇಳಿಕೆಯ ಪ್ರತಿಯನ್ನು ಈ ಪ್ರಕರಣದಲ್ಲಿ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. 2 & 3 ನೇ ಆರೋಪಿತರ ಸ್ವಖುಷಿ ಹೇಳಿಕೆಯ ಪ್ರತಿಯನ್ನು ನಿಪಿ-19 & 20 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-19 ಎ & 20 ಎ ಎಂದು ಗುರುತಿಸಲಾಯಿತು.

ದಿ.19-01-2022 ರಂದು 2ನೇ ಆರೋಪಿ ತೋರಿಸಿದ ಗುನ್ನಾ ಸ್ಥಳದ ಪಂಚನಾಮೆಯನ್ನು ಚಾಸಾ-8 & 9 ರವರ ಸಮಕ್ಷಮ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ನಿಪಿ-21 ಎಂದು, ಸಾಕ್ಷಿಯ ಹೇಳಿಕೆಯನ್ನು ನಿಪಿ-21 ಎ ಎಂದು ಗುರುತಿಸಲಾಯಿತು. ಆ ಕಾಲಕ್ಕೆ ನಿಪಿ-6 ರಂತೆ

ಫೋಟೋವನ್ನು ತೆಗೆದಿರುತ್ತೇನೆ. ನಂತರ ಚಾಸಾ-1, 10, 11, 12 ರವರ ಮರು ಹೇಳಿಕೆಗಳನ್ನು ಪಡೆದಿರುತ್ತೇನೆ. ನಂತರ ಚಾಸಾ-13, 15 & 16 ರವರ ಹೇಳಿಕೆಗಳ ಪ್ರತಿಯನ್ನು ಪಡೆದು, ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಕ್ರೈಂ ನಂ.146-2021 ರಲ್ಲಿ ನ್ಯಾಯಾಂಗ ಬಂಧನಕ್ಕೆ ಕಳಿಸಿದ್ದು, ಈ ಪ್ರಕರಣದಲ್ಲಿ ಬಾಡಿವಾರಂಟ್ ಪಡೆಯಲು ಮನವಿ ಸಲ್ಲಿಸಿದ್ದೆ.

ದಿ.24-01-2022 ರಂದು 1 ರಿಂದ 3 ನೇ ಆರೋಪಿತರನ್ನು ಪಿ ಸಿ ಕಸ್ಟಡಿಗೆ ಪಡೆದು, ದಸ್ತಗಿರಿ ಕ್ರಮ ಪಾಲಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ದಿ.26-01-2022 ರಂದು ಬಳ್ಳಾರಿ ಕೌಲ್ ಬಜಾರ್ & ಗ್ರಾಮೀಣ ಠಾಣೆಯಿಂದ ಸದರಿ ಆರೋಪಿತರ ವಿರುದ್ಧ ಆದ ಪ್ರಕರಣಗಳ ಮಾಹಿತಿ ಪಡೆದಿರುತ್ತೇನೆ. ಸಾಕ್ಷಿಯು 3 ಸ್ವತ್ತುಪಟ್ಟಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-22 ರಿಂದ 24 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-22 ಎ ಯಿಂದ 24 ಎ ಎಂದು ಗುರುತಿಸಲಾಯಿತು.

ಸಾಕ್ಷಿಯು ಆಭರಣದ 2 ದಾಖಲೆಗಳನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-2 & 3 ಎಂದು ಗುರುತಿಸಲಾಗಿದೆ. ಫೋಟೋಗಳನ್ನು ನಿಪಿ-5 & 6 ಎಂದು ಗುರುತಿಸಲಾಗಿದೆ.

ಸಾಕ್ಷಿಯು ಸ್ವಖುಷಿ ಹೇಳಿಕೆಯ ಮಾಲುಗಳನ್ನು ವಶಕ್ಕೆ ಪಡೆದ ಭಾಗವನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-16 ಬಿ, 19 ಬಿ & 20 ಬಿ ಎಂದು ಗುರುತಿಸಲಾಯಿತು.

ಸಾಕ್ಷಿಯು ಸಿಂಧನೂರು ನಗರ ಮೊ. ಸಂ. 146/2021 ರಲ್ಲಿ ಹಾಜರುಪಡಿಸಿದ್ದ ಪ್ಲಾಸ್ಟಿಕ್ ಚೀಲವನ್ನು ನೋಡಿ ಗುರುತಿಸಿದ್ದು, ಅದನ್ನು ಆ ಪ್ರಕರಣದಲ್ಲಿ ಮು ಮಾ ಎಂದು ಗುರುಗಿಸಲಾಗಿದೆ.

ಮೀಟಿ ತೆಗೆದ ಕೀಲಿ ಪತ್ತವನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ. 1 ಎಂದು ಗುರುತಿಸಲಾಯಿತು.

ಈಗಾಗಲೇ ನಿಶಾನೆಗೊಂಡ ದಾಖಲೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ನಿಪಿ-3 ರಿಂದ 16 ರಲ್ಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-3 ಎ ಯಿಂದ 16 ಎ ಎಂದು ಗುರುತಿಸಲಾಯಿತು. ಮೊ. ಸಂ. 146/2021 ರ ಪ್ರ. ವರದಿಯನ್ನು & ದೂರನ್ನು ನಿಪಿ-25 & 26 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-25 ಎ & 26 ಎ ಎಂದು, ಮೊ. ಸಂ. 1/2017 ರ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-27, ಸಾಕ್ಷಿಯ ಸಹಿಯನ್ನು ನಿಪಿ-27 ಎ ಎಂದು, ಅಂತಿಮ ವರದಿಯ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-28, ಸಾಕ್ಷಿಯ ಸಹಿಯನ್ನು ನಿಪಿ-28 ಎ ಎಂದು, 2 ಸ್ವತ್ತಪಟ್ಟಿಗಳನ್ನು ನಿಪಿ-29 & 30 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-29 ಎ, 30 ಎ ಎಂದು, ಕಲಂ.65 ಬಿ ಪ್ರ.ಪತ್ರವನ್ನು ನಿಪಿ-31 & 32 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-31 ಎ & 32 ಎ ಎಂದು, ಜ್ಞಾಪನಾ ಪತ್ರವನ್ನು ನಿಪಿ-33 ಎಂದು, ಸಾಕ್ಷಿಯ ಸಹಿಯನ್ನು ನಿಪಿ-33 ಎ ಎಂದು ,

ಅನುಬಂಧ-2 ನ್ನು ನಿಪಿ-34 ಎಂದು, ಸಾಕ್ಷಿಯ ಸಹಿಯನ್ನು ನಿಪಿ-34 ಎ ಎಂದು, ಸರ್ಚ್ ಸ್ಲಿಪ್‌ನ್ನು ನಿಪಿ-35 ಎಂದು, ಸಾಕ್ಷಿಯ ಸಹಿಯನ್ನು ನಿಪಿ-35 ಎ ಎಂದು ಗುರುತಿಸಲಾಯಿತು.

ದಿ.01-03-2022 ರಂದು ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ದೊರೆತಿದ್ದರಿಂದ ದೋಷಾರೋಪಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ 1 & 2 ನೇ ಆರೋಪಿತರ ಪರ ವಕೀಲರಿಂದಃ**

1. ಚಾಸ-1 ದೂರು ಕೊಡುವಾಗ ದಾಖಲೆಗಳನ್ನು ಹಾಜರುಪಡಿಸಿದ ಬಗ್ಗೆ ನಾನು ಕೇಳಿ ತಿಳಿದುಕೊಂಡಿಲ್ಲ. ಕಡತ ಪಡೆದ ನಂತರ ದೂರಿನ 3 ನೇ ಪ್ಯಾರಾದಲ್ಲಿ ಹೇಳಿದ ನಗದು ಹಣ & ಬಂಗಾರದ ಆಭರಣಗಳ ದಾಖಲೆಗಳನ್ನು ತಂದು ಹಾಜರುಪಡಿಸುವಂತೆ ಚಾಸಾ-1 ರವರಿಗೆ ನೋಟೀಸು ಕೊಟ್ಟಿಲ್ಲ.

2. ವೆಂಕಟೇಶ್ವರ ಕ್ಯಾಂಪಿನಲ್ಲಿ ವೆಂಕಟೇಶ್ವರ ರಾವ್ ರವರಿಗೆ ಸಂಬಂಧ ಪಟ್ಟ ಮನೆ ಇದ್ದ ಬಗ್ಗೆ ದಾಖಲೆಯನ್ನು ನಾನು ಪಡೆದಿಲ್ಲ. ದಿ.29-11-2021 ರಂದು ರಾ. 10 ಗಂಟೆಗೆ ಪ್ರ. ವ. ವರದಿಯನ್ನು ತಯಾರಿಸಿದ್ದಾರೆ ಎಂದರೆ ಸರಿ. ಅದೇ ದಿನ ರಾತ್ರಿ 9 ಗಂಟೆಗೆ ದೂರು ಕೊಟ್ಟಿದ್ದರು ಎಂದರೆ ಸರಿ. ದೂರು ಕೊಡಲು ವಿಳಂಬವಾದ ಬಗ್ಗೆ ದೂರಿನಲ್ಲಿ ತಿಳಿಸಿಲ್ಲ ಎಂದರೆ ಸಾಕ್ಷಿಯು ಮನೆಯಲ್ಲಿ ವಿಚಾರಮಾಡಿಕೊಂಡು ಬಂದು ದೂರು ಕೊಡಲು ತಡವಾಗಿದೆ ಎಂದು ತಿಳಿಸಿದ್ದರು. ಯಾರವನ್ನು ವಿಚಾರಣೆ ಮಾಡಿದ್ದರು ಎಂದು ನನ್ನ ತನಿಖೆಯಲ್ಲಿ ನಾನು ಕೇಳಿ ತಿಳಿದುಕೊಂಡಿಲ್ಲ. ದೂರನ್ನು ನಾನು ಪರಿಶೀಲನೆ ಮಾಡಿದ್ದೇನೆ. ದೂರಿನಲ್ಲಿ ದೊಡ್ಡಮ್ಮನ ಅಳಿಯ ತೀರಿಕೊಂಡಿದ್ದ ಎಂದು ನಮೂದು ಇದೆ, ಆ ಅಳಿಯನ ಹೆಸರನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಿಲ್ಲ.

3. ಆಸ್ತಿಗೆ ಸಂಬಂಧಿಸಿದಂತೆ ನೊಂದಣಿಯಾದ ಪತ್ರಗಳು ಹಾಗೂ ಇನ್ನಿತರ ದಾಖಲೆಗಳನ್ನು ನಾನು ಪಡೆದಿಲ್ಲ. ಅವರು ಯಾವ ವ್ಯವಸ್ಥೆಯಲ್ಲಿ ಹೋಗಿದ್ದರು ಎಂದು ನಾನು ನನ್ನ ತನಿಖೆಯಲ್ಲಿ ವಿಚಾರಣೆ ಮಾಡಿಲ್ಲ. ಕೆಳಗೆ ಬಿದ್ದ ಕೀಲಿಗಳನ್ನು ನಾನು ವಶಕ್ಕೆ ಪಡೆದಿದ್ದೆ. ಯಾವ ಕಂಪನಿಯದ್ದು, ಯಾವ ಬಣ್ಣದ್ದು ಎಂದು ಪಿ ಎಫ್ ನಲ್ಲಿ ನಮೂದಿಸಿಲ್ಲ ಎಂದರೆ ಸರಿ.

4. ಗುನ್ನಾ ಸ್ಥಳ ಪಂಚನಾಮೆಯ ಕಾಲಂ.9 ರಲ್ಲಿ ವಶಕ್ಕೆ ಪಡೆದ ಮಾಲುಗಳ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ಪಿಎಫ್ ನ್ನು ನಿಮ್ಮ ತನಿಖೆಗೆ ಅನುಕೂಲವಾಗುವಂತೆ ತಯಾರಿಸಿದ್ದರಿಂದ ಯಾವುದೇ ಮಾಲುಗಳ ವಿವರವನ್ನು ಹಾಕಿಲ್ಲ ಎಂದರೆ ಸರಿಯಲ್ಲ. ಗುನ್ನಾ ಸ್ಥಳ ಪಂಚನಾಮೆಯಲ್ಲಿ ಆರ್ ಆರ್ ನಂಬರ್ ನಮೂದಿಸಿದ್ದೇನೆ, ಅದರ ಬಿಲ್ಲನ್ನು ನಾನು ಪಡೆದಿಲ್ಲ.

5. ಕಚ್ಚಾ ನಕಾಶೆಗೆ ಸಾಕ್ಷಿದಾರರ & ಚಾಸಾ-1 ರವರ ಸಹಿ ಪಡೆದಿಲ್ಲ ಎಂದರೆ ಸರಿ. ನಿಪಿ-18 ರಲ್ಲಿ ಭಾವಚಿತ್ರ ತೆಗೆದ ಸಾಧನ ಯಾವುದು ಎಂದು ತೋರಿಸಿಲ್ಲ ಎಂದರೆ ಸರಿ. ಪಂಚನಾಮೆಯಲ್ಲಿರುವ ಪಂಚರುಗಳಿಗೆ ಅದೇ ದಿನ ನೋಟೀಸು ನೀಡಿದ್ದೆ.

6. ಸಾಮಾನ್ಯವಾಗಿ ನನ್ನ ಕರ್ತವ್ಯದ ಅವಧಿ 24/7. ದಿ.30-11-2021 ರಂದು ಪಂಚರಿಗೆ ಪಂಚನಾಮೆ ಮಾಡುವ ಮುಂಚೆ ನೋಟೀಸು ಕೊಟ್ಟಿದ್ದೆ, ಆದರೆ ಸಮಯ ನೆನಪಿಲ್ಲ. ನಿಮಗೆ ಅನುಕೂಲವಾಗುವಂತೆ ಪಂಚನಾಮೆ ತಯಾರಿಸಿದ್ದೀರಿ ಆದ್ದರಿಂದ ಸಮಯ ನಮೂದಿಸಿಲ್ಲ ಎಂದರೆ ಸರಿಯಲ್ಲ. ನಿಪಿ-2 & 17 ಒಂದೇ ರೀತಿ ಇದೆ ಎಂದರೆ ಸಾಕ್ಷಿಯು ಅವುಗಳು ಗುನ್ನಾ ಸ್ಥಳದ ಪಂಚನಾಮೆಗಳು ಎನ್ನುತ್ತಾರೆ. ಸದರಿ ನಿಪಿ-2 & 17 ರ ಪಂಚರುಗಳಿವೆ ನೋಟೀಸನ್ನು ಕೊಟ್ಟ ಸಮಯ ಈಗ ನೆನಪಿಲ್ಲ.

7. ಸಾಕ್ಷಿಗೆ ನಿಪಿ-5 ಫೋಟೋವನ್ನು ತೋರಿಸಿ, ಸದರಿ ಫೋಟೋದಲ್ಲಿರುವ ವ್ಯಕ್ತಿಗಳ ಹೆಸರುಗಳನ್ನು ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿಯು ಈಗ ನನಗೆ ನೆನಪಿಲ್ಲ ಎನ್ನುತ್ತಾರೆ. ನಿಪಿ-17 ರಲ್ಲಿ ನೀವು ಯಾವುದೇ ಮಾಲನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿ. ನಿಪಿ-2 & 17 ರಲ್ಲಿನ ನಕಾಶೆಗಳನ್ನು ನನ್ನ ತನಿಖಾ ಸಹಾಯಕರು ಮಾಡಿದ್ದರು, ಅವರ ಹೆಸರು ಈಗ ನೆನಪಿಲ್ಲ. ಅವರ ಸಹಿಗಳನ್ನು ಪಡೆದಿಲ್ಲ ಎಂದರೆ ಸರಿ.

8. ನಿಪಿ-11 ನ್ನು ಠಾಣೆಯಲ್ಲಿಯೇ ಮಾಡಿದ್ದೀರಿ ಎಂದರೆ ಸರಿ. ನಿಪಿ-11 ರ 2ನೇ ಪಂಚರನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನಿಪಿ-6 ರಲ್ಲಿರುವ ಜಾಗವೇ ನಿಪಿ-2 & 17 ರಲ್ಲಿರುವ ಜಾಗ ಎಂದರೆ ಸರಿ.

9. ಪರಿಣಿತರ ವಿದ್ಯಾರ್ಹತೆ ಪ್ರ.ಪತ್ರವನ್ನು ನಾನು ಪಡೆದಿಲ್ಲ. ಆಭರಣಗಳನ್ನು ತೂಕ ಮಾಡಿದ ಬಗ್ಗೆ & ಪರೀಕ್ಷಿಸಿದ ಬಗ್ಗೆ ಆ ಪರಿಣಿತರಿಂದ ವರದಿಯನ್ನು ಪಡೆದಿಲ್ಲ. ನಿಮಗೆ ಬೇಕಾದಂತೆ ನೀವೇ ವರದಿ ತಯಾರಿಸಿರುತ್ತೀರಿ ಎಂದರೆ ಸರಿಯಲ್ಲ.

10. ಚಾಸಾ-20 ರವರು ಒಂದು ಖಾಸಗಿ ಜೀಪಿನಲ್ಲಿ ಹೋಗಿದ್ದ ಬಗ್ಗೆ ಹೇಳಿರುತ್ತಾರೆ, ಅದು ಯಾರದ್ದು, ಅದರ ಚಾಲಕ ಯಾರು ಎಂದು ನಾನು ವಿಚಾರಣೆ ಮಾಡಿಲ್ಲ.

11. ನಿಮ್ಮ ಹಿಂದಿನ ತನಿಖಾಧಿಕಾರಿ ಸಿಂಧನೂರು ಠಾಣೆಗೆ ಬರುವ ಮುಂಚೆ ಬಳ್ಳಾರಿಯ ಗಾಂಧಿನಗರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಅಲ್ಲಿರುವ ಪ್ರಕರಣದಲ್ಲಿರುವ ಆರೋಪಿತರ ವಿರುದ್ಧ ಈ ಪ್ರಕರಣದಲ್ಲಿ ಸುಳ್ಳು ಕೇಸು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ.

12. ಆರೋಪಿತರಿಗೂ ಈ ಕೇಸಿನಲ್ಲಿರುವ ಘಟನೆಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹ, ಸುಳ್ಳು ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ತನಿಖೆ ಮಾಡಿ, ಆರೋಪಿತರ ತಪ್ಪು ಇಲ್ಲದೇ ಇದ್ದರೂ ಸಹ ದೂರುದಾರರ ಮಾತು ಕೇಳಿ ಸುಳ್ಳು ಅಂತಿಮ ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**